

# ತಾಂಜಾನಿಯಾದ ಕನಸಿನ ರಾಣಿ

■ ಪ್ರವೀಣ ಕುಲಕರ್ಣಿ

ಸಮಿಯಾ ಸುಲುಹು ಹಸನ್!

ಆಫ್ರಿಕಾ ಖಂಡದಲ್ಲಿ ದೊಡ್ಡ ಸಂಚಲನವನ್ನು ಉಂಟುಮಾಡಿದ ಹೆಸರಿದು. ತಾಂಜಾನಿಯಾದ ಅಧ್ಯಕ್ಷೆಯಾಗಿರುವ ಅವರು ಆ ಸ್ಥಾನಕ್ಕೆ ಏರಿದ ಮೊದಲ ಮಹಿಳೆ ಎಂಬ ಹಿರಿಮೆಗೆ ಪಾತ್ರವಾದವರು. ಸರ್ವಾಧಿಕಾರಿ ಧೋರಣೆಯಿಂದ ಕುಖ್ಯಾತಿ ಗಳಿಸಿದ್ದ ಅಧ್ಯಕ್ಷ ಜಾನ್ ಮಗುಫುಲಿ ಅಕಾಲಿಕವಾಗಿ ಸಾವನ್ನಪ್ಪಿದಾಗ ಉಪಾಧ್ಯಕ್ಷೆಯಾಗಿದ್ದ ಸಮಿಯಾ ಅವರಿಗೆ ಅಧ್ಯಕ್ಷಗಿರಿಯ ಪಟ್ಟ ಅನಿರೀಕ್ಷಿತವಾಗಿ ಒಲಿದು ಬಂತು. ಮಗುಫುಲಿ ಎಂತಹ ವಿಚಿತ್ರ ವ್ಯಕ್ತಿಯಾಗಿದ್ದರು ಎಂದರೆ ತಮ್ಮ ದೇಶದಲ್ಲಿ ಕೊರೊನಾ ವೈರಸ್‌ನಿಂದ ಜನ ನೋವು ಅನುಭವಿಸುತ್ತಿದ್ದರೂ ಅದರ ಕಾಟ ಇಲ್ಲವೇ ಇಲ್ಲ ಎಂದು ವಾದಿಸಿದ್ದರು. ಲಸಿಕೆ ಹಾಕಿಸಿಕೊಳ್ಳುವ ಅಗತ್ಯವಿಲ್ಲ ಎಂದೂ ಪ್ರತಿಪಾದಿಸಿದ್ದರು. ಅನಾರೋಗ್ಯದಿಂದ ದೀರ್ಘಕಾಲದವರೆಗೆ ಹಾಸಿಗೆ ಹಿಡಿದಿದ್ದ ಅವರು, ಕೊನೆಗೆ 2021ರಲ್ಲಿ ಆಸ್ಪತ್ರೆಯಲ್ಲೇ ಕೊನೆಯುಸಿರು ಎಳೆದಿದ್ದರು. ಅವರಿಗೂ ಸೋಂಕು ತಗುಲಿತ್ತು ಎಂಬ ವರದಿಗಳಿವೆಯಾದರೂ ಈ ಕುರಿತು ಅಧಿಕೃತವಾಗಿ ಯಾವುದೇ ಹೇಳಿಕೆಯನ್ನು ಸರ್ಕಾರ ಬಿಡುಗಡೆ ಮಾಡಿರಲಿಲ್ಲ.

ಅಧ್ಯಕ್ಷಸ್ಥಾನಕ್ಕೆ ಏರಿದ ಮೊದಲ ದಿನದಿಂದಲೇ ಸಮಿಯಾ ಭಿನ್ನಹಾದಿಯನ್ನು ತುಳಿದವರು. ದೇಶದ ಎಲ್ಲ ಪ್ರಜೆಗಳೂ ಲಸಿಕೆ ಹಾಕಿಸಿಕೊಳ್ಳಬೇಕು ಎಂದು ಕರೆ ನೀಡಿದ ಅವರು, ಮೊದಲ ಡೋಸ್ ಅನ್ನು ಸಾರ್ವಜನಿಕವಾಗಿ ತಾವೇ ಪಡೆದುಕೊಳ್ಳುವ ಮೂಲಕ ಜನರಲ್ಲಿ ವಿಶ್ವಾಸ ತುಂಬುವ ಪ್ರಯತ್ನ ಮಾಡಿದರು. ಗರ್ಭಿಣಿ ವಿದ್ಯಾರ್ಥಿನಿಯರು ಶಾಲೆಗೆ ಬರುವಂತಿಲ್ಲ ಎಂಬ ನಿರ್ಬಂಧವನ್ನು ತೆಗೆದು ಹಾಕಿದರು. ಬಂಡವಾಳ ಹೂಡಲು ಇದ್ದ ಅಡೆತಡೆಗಳನ್ನು ನಿವಾರಿಸುವ ಮೂಲಕ ದೇಶಕ್ಕೆ ಆರ್ಥಿಕ ಚೇತನ ನೀಡುವ ಕೆಲಸವನ್ನೂ ಮಾಡಿದರು. ಭೌಗೋಳಿಕ ರಾಜಕೀಯದ ಮೇಲಾಟದ ಈ ಸನ್ನಿವೇಶದಲ್ಲಿ ರಾಯಭಾರದ ಮಹತ್ವ ಅರಿತಿರುವ ಅವರು, ಅಮೆರಿಕ ಸೇರಿದಂತೆ ಹಲವು ದೇಶಗಳಿಗೆ ಭೇಟಿ ನೀಡಿ, ತಾಂಜಾನಿಯಾ ಪರ ಬೆಂಬಲವನ್ನೂ ಯಾಚಿಸಿದರು. ಮೂಲೆಗುಂಪಾಗಿದ್ದ ದೇಶವನ್ನು ಜಗತ್ತಿನೊಂದಿಗೆ ಮತ್ತೆ ಜೋಡಿಸಲು ಹೆಣಗಾಡುತ್ತಿರುವ ಅವರು, ಮುಖ್ಯವಾಹಿನಿಯಲ್ಲಿ ತಮ್ಮ ದೇಶವೂ ಇರಬೇಕು ಎಂದು ಹಂಬಲಿಸುತ್ತಿರುವವರು.

‘ಅಧ್ಯಕ್ಷ ಸ್ಥಾನದಲ್ಲಿ ಮಹಿಳೆಯನ್ನು ಕೂಡಿಸುವುದೇ? ಛೇ ಛೇ... ಅದನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ’ ಎಂದು ಮೂಗು ಮುರಿದವರಿಗೆ ಮೌನಕ್ರಾಂತಿಯ ಮೂಲಕ ಉತ್ತರ ಕೊಟ್ಟವರು ಆಕೆ. ಅಧ್ಯಕ್ಷ ಸ್ಥಾನದಲ್ಲಿ ಮಹಿಳೆ ಬೇಡ ಎಂಬ ನಿಲುವಳಿಗೆ ಸಂಸತ್ತಿನಲ್ಲಿ ಸೋಲುಂಟಾಗುವಂತೆ ಮಾಡಿದ ಸಮಿಯಾ ಹೆಮ್ಮೆಯಿಂದ ಬೀಗಿದರು. ‘ಮಹಿಳೆಯೂ ದೇಶವನ್ನು ಮುನ್ನಡೆಸಬಹುದು ಎಂಬುದನ್ನು ನಂಬಲು ಬಹುಪಾಲು ಜನ ಸಿದ್ಧರೇ ಇರಲಿಲ್ಲ. ಅವರ ವಿಶ್ವಾಸ ಗೆಲ್ಲುವುದೇ ದೊಡ್ಡ ಸವಾಲಾಗಿತ್ತು. ಆ ಮೊದಲ ಸವಾಲವನ್ನು ನಾವೀಗ ಯಶಸ್ವಿಯಾಗಿ ಮೆಟ್ಟಿ ನಿಂತಿದ್ದೇವೆ’ ಎಂದು ಅವರು ಹರ್ಷ ವ್ಯಕ್ತಪಡಿಸುತ್ತಾರೆ.

ಜನಾಂಗೀಯ ಕಲಹ ಹಾಗೂ ಆಂತರಿಕ ದಂಗೆಗಳಿಂದ ನಲುಗಿಹೋಗಿದ್ದ ತಾಂಜಾನಿಯಾದಲ್ಲಿ ನಿಧಾನವಾಗಿ ಶಾಂತಿ ಹಾಗೂ ಸ್ಥಿರತೆ ಕಾಣುತ್ತಿದ್ದು ಅದಕ್ಕೆ ಸಮಿಯಾ ಕಾರಣರಾಗಿದ್ದಾರೆ. ಆರು ಕೋಟಿ ಜನಸಂಖ್ಯೆಯ ಈ ರಾಷ್ಟ್ರದ ಗಡಿಯನ್ನು ಎಂಟು ದೇಶಗಳು ಹಂಚಿಕೊಂಡಿವೆ. ನೆರೆಹೊರೆಯ ದೇಶಗಳ ಜತೆಗೂ ಸೌಹಾರ್ದದ ಸಂಬಂಧವನ್ನು ಅವರು ಬಯಸಿದ್ದಾರೆ. ಆದರೆ, ರಾಷ್ಟ್ರವನ್ನು ಮುನ್ನಡೆಸುವ ಅವರ ಹಾದಿಯೇನೂ ಸುಲಭವಾಗಿಲ್ಲ. ಧ್ರುವೀಕರಣಗೊಂಡ ಸಮುದಾಯಗಳು, ಹೆಚ್ಚುತ್ತಿರುವ ನಿರುದ್ಯೋಗ ಸಮಸ್ಯೆ, ಪುರುಷಪ್ರಧಾನ ವ್ಯವಸ್ಥೆ ಸಂವಿಧಾನದಲ್ಲಿ ಇರುವ ಅಡೆತಡೆಗಳು, ಆರ್ಥಿಕ ಹಿಂಜರಿತ – ಇವೆಲ್ಲದರಿಂದ ದೇಶವನ್ನು ಪಾರು ಮಾಡಲು ಕಠಿಣ ಕಸರತ್ತನ್ನೇ ಅವರು ನಡೆಸಬೇಕಿದೆ.

ಆರೋಗ್ಯ ಕ್ಷೇತ್ರ – ಸಮಿಯಾ ಅವರ ಆದ್ಯತಾ ವಲಯಗಳಲ್ಲಿ ಒಂದು. ಜನರ ಆರೋಗ್ಯ ಚೆನ್ನಾಗಿದ್ದರೆ ದೇಶ ಏನನ್ನು ಬೇಕಾದರೂ ಸಾಧಿಸಬಹುದು ಎಂಬ ನಂಬಿಕೆ ಅವರದು. ಈ ಕ್ಷೇತ್ರದಲ್ಲಿ ಬಂಡವಾಳ ಹೂಡುವಂತೆ ಹಲವು ದೇಶಗಳಿಗೆ ಅವರು ಮನವಿ ಮಾಡಿದ್ದಾರೆ. ಪ್ರವಾಸೋದ್ಯಮದ ಉತ್ತೇಜನಕ್ಕೂ ಒತ್ತು ನೀಡಿದ್ದಾರೆ. ಉಕ್ರೇನ್‌ನಲ್ಲಿ ಯುದ್ಧ ಸಾರಿದ ರಷ್ಯಾ ವಿರುದ್ಧ ವಿಶ್ವಸಂಸ್ಥೆಯಲ್ಲಿ ಅಮೆರಿಕ ಮಂಡಿಸಿದ್ದ ಖಂಡನಾ ನಿರ್ಣಯದ ಮತದಾನದ ವೇಳೆ ತಾಂಜಾನಿಯಾ ಸಹ ಭಾರತದಂತೆಯೇ ಗೈರಾಗಿತ್ತು. ಸಮಿಯಾ ಅವರು ಅಲಿಪ್ತ ನೀತಿಯನ್ನು ಅನುಸರಿಸುವುದಕ್ಕೆ ಇದು ಸಾಕ್ಷಿಯಾಗಿತ್ತು.

ಜಾಂಜಿಬಾರ್ ದ್ವೀಪಸಮೂಹದಲ್ಲಿ ಜನಿಸಿದ ಅವರು, ಸಾರ್ವಜನಿಕ ಆಡಳಿತದಲ್ಲಿ ಸ್ನಾತಕೋತ್ತರ ಪದವಿ ಪಡೆದವರು. ಹಲವು ಸರ್ಕಾರೇತರ ಸಂಸ್ಥೆಗಳ ದೊಡ್ಡ ಹುದ್ದೆಗಳಲ್ಲಿ ಕೆಲಸ ಮಾಡಿದವರು. ಬಳಿಕ ರಾಜಕೀಯ ಪ್ರವೇಶಿಸಿದ ಅವರು, ಚಾಮಾ ಚಾ ಮಪಿಂಡುಝಿ (ಕ್ರಾಂತಿಕಾರಿ) ಪಕ್ಷವನ್ನು ಸೇರಿದರು. ಬಲುಬೇಗ ಎತ್ತರಕ್ಕೆ ಬೆಳೆದ ಅವರು, ಉಪಾಧ್ಯಕ್ಷರ ಕಚೇರಿಯಲ್ಲಿ ಅಧಿಕಾರಿ ಹುದ್ದೆಯಿಂದ ಉಪಾಧ್ಯಕ್ಷೆಯೇ ಆಗಲು ಹೆಚ್ಚಿನ ಸಮಯ ಹಿಡಿಯಲಿಲ್ಲ. ಸಮಿಯಾ ಅವರ ಪತಿ ಹಫೀದ್ ಅಮೀರ್ ಹಫೀದ್ ನಿವೃತ್ತ ಪ್ರಾಧ್ಯಾಪಕ. ಕೃಷಿ ವಿಶ್ವವಿದ್ಯಾಲಯದಲ್ಲಿ ಬೋಧನೆ ಮಾಡಿದ ಹಫೀದ್ ಅವರ ಬೆಂಬಲವೂ ಸಮಿಯಾ ಅವರಿಗಿದೆ. ಆದ್ದರಿಂದಲೇ ಅಧ್ಯಕ್ಷರ ಅಭಿವೃದ್ಧಿ ಯೋಜನೆಗಳಲ್ಲಿ ಗ್ರಾಮಾಂತರ ಭಾಗವೇ ಆದ್ಯತೆ ಪಡೆದಿದೆ.

ಸಾವಿರಾರು ಸರ್ಕಾರಿ ಆಸ್ಪತ್ರೆಗಳನ್ನು ಕಟ್ಟುವ, ಶಾಲೆಗಳನ್ನು ನಿರ್ಮಿಸುವ, ಕುಡಿಯುವ ಶುದ್ಧ ನೀರು ಒದಗಿಸುವ, ಗ್ರಾಮೀಣ ಭಾಗದಲ್ಲೂ ಗುಣಮಟ್ಟದ ವಿದ್ಯುತ್ ಪೂರೈಸುವ ಮಾತುಗಳನ್ನು ಸಮಿಯಾ ಆಡುತ್ತಿದ್ದಾರೆ. ರೈಲ್ವೆ ಮಾರ್ಗದ ನಿರ್ಮಾಣವೂ ಆ ದೇಶದಲ್ಲಿ ಭರದಿಂದ ನಡೆದಿದೆ. ಅವರ ಪ್ರಯತ್ನಕ್ಕೆ ಈಗಾಗಲೇ ಫಲ ಸಿಗುತ್ತಿದೆ ಎನ್ನುವುದಕ್ಕೆ ಸಾಕ್ಷಿಯಾಗಿ 250 ಬಹುರಾಷ್ಟ್ರೀಯ ಕಂಪನಿಗಳು ತಾಂಜಾನಿಯಾದಲ್ಲಿ ಬಂಡವಾಳ ಹೂಡಲು ಮುಂದೆ ಬಂದಿವೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65